# ಜಾನಪದ ಗೀತೆಗಳ ವೈವಿಧ್ಯತೆ

**ಸೋಮಶೇಖರಪ್ಪ ಹೆಚ್.**

ಮುಖ್ಯಸ್ಥರು, ಕನ್ನಡ ವಿಭಾಗ, ಎಸ್.ಎಸ್.ಎನ್ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಹುಕ್ಕೇರಿ.

**DOI: https://doi.org/10.5281/zenodo.17255141**

## ABSTRACT:

ಈ ಲೇಖನದ ಪ್ರಮುಖ ಉದ್ದೇಶವು ಜನಪದ ಗೀತೆಗಳ ವೈವಿಧ್ಯತೆಯನ್ನು ವಿಶ್ಲೇಷಿಸುವುದರೊಂದಿಗೆ, ಅವುಗಳಲ್ಲಿ ಅಡಗಿರುವ ಸಾಮಾಜಿಕ, ಸಾಂಸ್ಕೃತಿಕ ಮತ್ತು ಭಾವನಾತ್ಮಕ ಅಂಶಗಳನ್ನು ಅನಾವರಣಗೊಳಿಸುವುದಾಗಿದೆ. ಜನಪದ ಗೀತೆಗಳು ಕೇವಲ ಕಲಾತ್ಮಕ ಗೀತೆಗಳಲ್ಲ, ಬದಲಾಗಿ ಅವು ಜನಜೀವನದ ಸಾಂಸ್ಕೃತಿಕ ದಾಖಲೆಗಳಾಗಿವೆ. ನಿತ್ಯಜನ ಜೀವನದ ಒಂದು ಭಾಗವಾದ ಜಾನಪದ ಗೀತೆಗಳು ಅತ್ಯಂತ ವೈವಿಧ್ಯಮಯವಾಗಿ ಕನ್ನಡ ನಾಡಿನ ಪ್ರಾದೇಶಿಕ ಸೊಗಡುಗಳನ್ನು ನಮ್ಮ ಮುಂದಿನ ಪೀಳಿಗೆಗೆ ಜೋಪಾನ ಮಾಡಿವೆ ಎಂದರೆ ತಪ್ಪಲ್ಲ. ಇಂದಿನ ಪಾಶ್ಚಾತ್ಯ ಶೈಲಿಯ ಸಂಗೀತದ ಮಧ್ಯೆ ಜಾನಪದ ಗೀತೆಗಳು ತನ್ನ ಹಿಂದಿನ ವೈಭವವನ್ನು ಕಳೆದುಕೊಳ್ಳುವಂತಿದೆ. ಜನಪದ ಗೀತೆಗಳು ಸಾಂಸ್ಕೃತಿಕ ಆಸ್ತಿ. ವಿವಿಧ ಕ್ಷೇತ್ರಗಳಾದ ಕೃಷಿ, ಮದುವೆ, ಹಬ್ಬಹರಿದಿನ, ಧಾರ್ಮಿಕ ಆಚರಣೆಗಳು, ಜನನಮರಣದ ಸಂಪ್ರದಾಯಗಳು ಮೊದಲಾದ ವಿಚಾರಗಳನ್ನು ಗೀತೆಗಳ ರೂಪದಲ್ಲಿ ಕಟ್ಟಿಕೊಡಲಾಗಿದೆ. ಅವು ಪ್ರಾದೇಶಿಕ ವೈಶಿಷ್ಟ್ಯತೆ, ಸ್ಥಳೀಯ ಸಾಂಸ್ಕೃತಿಕ ಮತ್ತು ಜನಜೀವನದ ಹೋರಾಟಹರ್ಷಗಳನ್ನು ಪ್ರತಿಬಿಂಬಿಸುತ್ತವೆ. ಭಾವನಾತ್ಮಕ ಅಂಶಗಳಾದ ಪ್ರೀತಿಪ್ರೇಮ, ತಾಯಿಮಗುವಿನ ಬಾಂಧವ್ಯ, ಶೌರ್ಯ, ಧಾರ್ಮಿಕ ಭಕ್ತಿ ಮತ್ತು ಸಮೂಹ ಜೀವನದ ಒಗ್ಗಟ್ಟನ್ನು ಅವು ಸ್ಪಷ್ಟಪಡಿಸುತ್ತವೆ. ಜನಪದ ಗೀತೆಗಳ ವೈವಿಧ್ಯತೆ ಭಾರತೀಯ ಸಂಸ್ಕೃತಿಯ ಸಮೃದ್ಧ ಪರಂಪರೆಯ ಜೀವಂತ ನಿದರ್ಶನವಾಗಿದೆ. ಅವು ಕೇವಲ ಹಳೆಯ ಕಾಲದ ನೆನಪುಗಳಲ್ಲ, ಬದಲಾಗಿ ಆಧುನಿಕ ಕಾಲದಲ್ಲಿಯೂ ಜನರಿಗೆ ಪ್ರೇರಣೆ ಮತ್ತು ಸಾಂಸ್ಕೃತಿಕ ಗುರುತಿನ ಭಾವನೆ ನೀಡುತ್ತಿವೆ. ಹೀಗಾಗಿ ಜನಪದ ಗೀತೆಗಳ ಅಧ್ಯಯನವು ಭಾರತೀಯ ಸಮಾಜದ ಅಂತರಂಗವನ್ನು ಅರ್ಥಮಾಡಿಕೊಳ್ಳಲು ಹಾಗೂ ಅದರ ಸಾಂಸ್ಕೃತಿಕ ಏಕತೆಯನ್ನು ಅರಿಯಲು ಮಹತ್ವದ್ದಾಗಿದೆ.

## KEYWORDS:

ಜನಪದ, ವೈವಿಧ್ಯತೆ, ಸಾಂಸ್ಕೃತಿಕ, ಪರಂಪರೆ, ಹಬ್ಬಹರಿದಿನ, ಸಂಪ್ರದಾಯ.

'ಜಾನಪದ' ಎನ್ನುವ ಪದ ಇಂಗ್ಲಿಷಿನಲ್ಲಿ 'Folklore' ಎಂಬುದಕ್ಕೆ ಸಮಾನಾರ್ಥಕವಾಗಿ ಬಳಸಿರುವ ಕನ್ನಡ ಪದ. 'Folklore' ಎನ್ನುವುದು 'Folk' & 'Lore' ಎಂಬ ಎರಡು ಪ್ರತ್ಯೇಕ ಅರ್ಥವನ್ನು ಉಳ್ಳ ಪದಗಳ ಸಂಯೋಗದಿಂದ ಕೂಡಿದೆ. 'Folk' ಎನ್ನುವುದಕ್ಕೆ ಕನ್ನಡದಲ್ಲಿ ಜನಪದ ಎಂದೂ, 'Lore' ಜ್ಞಾನ ಎಂದೂ ಇದೆ. 'ಜಾನಪದ ಜ್ಞಾನ' ಈ ವಿಷಯಕ್ಕೆ ಡಾ. ಹಾ.ಮಾ. ನಾಯಕ ಅವರು ಜಾನಪದ ಎಂಬ ಶಬ್ದವನ್ನು ಬಳಸಿದ್ದಾರೆ. ಜನಪದ ಜ್ಞಾನವೇ ಜನಪದ ಎಂದು ಕರೆಯಬಹುದು. ಜನಪದರ ಸಾಹಿತ್ಯ, ಸಂಗೀತ, ನೃತ್ಯ, ಆಟ ಈ ಎಲ್ಲವನ್ನು ಒಳಗೊಂಡಿದ್ದೇ ಜಾನಪದವೆಂದು ಹೇಳಬಹುದು. ಮನುಷ್ಯನ ಬದುಕಿನೊಂದಿಗೇ ಅವಿನಾಭಾವ ಸಂಬಂಧವನ್ನು ಹೊಂದಿ ತಲೆತಲೆಮಾರುಗಳಿಂದ ಬಂದಿರುವ ಮೌಖಿಕ ಪರಂಪರೆಯಲ್ಲಿನ ಸಂಬಂಧ ಜ್ಞಾನವೇ ಜಾನಪದ. ಜನಪದ ಎಂಬ ಪದವು 'ಜನ' ಜನರು ಅಥವಾ ಬುಡಕಟ್ಟು 'ಪದ' ಎಂಬ ಎರಡು ಪದಗಳಿಂದ ರೂಪುಗೊಂಡಿದೆ. ಒಂದು ರೀತಿಯ ಸಣ್ಣ ಪದ್ಯವು ಸಂಧಿವ್ಯಾಕರಣ ಪದವಾಗಿ ಸೇರಿಕೊಂಡಿದೆ. ಕನ್ನಡ ಜನರ ಜಾನಪದ ಸಂಸ್ಕೃತಿ ಮತ್ತು ಆಡುಮಾತಿನ ಭಾಷೆಯು, ಭಾಷೆಗಳು ಅಸ್ತಿತ್ವಕ್ಕೆ ಬಂದ ಸಮಯದಿಂದ ಈ ಹೆಸರಿನಿಂದ ಕರೆಯಲ್ಪಡುತ್ತಿತ್ತು.

ಭಾರತ ದೇಶದಲ್ಲೇ ನಮ್ಮ ಕರ್ನಾಟಕದ ಜಾನಪದ ಸಂಸ್ಕೃತಿ ಅತ್ಯಂತ ಶ್ರೀಮಂತವಾಗಿದೆ. ಕಲೆ, ಸಾಹಿತ್ಯ, ನೃತ್ಯ (ಡೊಳ್ಳು ಕುಣಿತ, ಕಂಸಾಳೆ, ಕರಡಿ ಮಜಲು, ವೀರಗಾಸೆ, ನಂದಿಕೋಲು ಕುಣಿತ, ಇತ್ಯಾದಿ), ನಾಟಕ (ಬಯಲಾಟ, ದೊಡ್ಡಾಟ, ಶ್ರೀ ಕೃಷ್ಣಪಾರಿಜಾತ, ಯಕ್ಷಗಾನ) ಮುಂತಾದ ವಿವಿಧ ಪ್ರಕಾರಗಳನ್ನು ನಮ್ಮ ಕನ್ನಡ ಜಾನಪದ ಸಂಸ್ಕೃತಿಯಲ್ಲಿ ಕಾಣಬಹುದು. ಕನ್ನಡ ಜಾನಪದ ಸಂಸ್ಕೃತಿಯ ಒಂದು ಭಾಗವಾದ ಜಾನಪದ ಗೀತೆಗಳು ಅತ್ಯಂತ ವೈವಿಧ್ಯಮಯವಾಗಿ ಕನ್ನಡ ನಾಡಿನ ವಿವಿಧ ಪ್ರದೇಶಗಳ ಪ್ರಾದೇಶಿಕ ಸೊಗಡುಗಳನ್ನು ನಮ್ಮ ಮುಂದಿನ ಪೀಳಿಗೆಗೆ ಜೋಪಾನ ಮಾಡಿವೆ ಎಂದರೆ ತಪ್ಪಲ್ಲ. ಇಂದಿನ ಪಾಶ್ಚಾತ್ಯ ಶೈಲಿಯ ಸಂಗೀತದ ಮಧ್ಯೆ ಜಾನಪದ ಗೀತೆಗಳು ತನ್ನ ಹಿಂದಿನ ವೈಭವವನ್ನು ಸ್ವಲ್ಪಮಟ್ಟಿಗೆ ಕಳೆದುಕೊಂಡಿವೆ ಎಂದೆನಿಸಿದರೂ ತನ್ನ ಮೂಲನೆಲೆಯಾದ ಹಳ್ಳಿಗಳಲ್ಲಿ ಇನ್ನೂ ತನ್ನ ನೆಲೆಯನ್ನು ಭದ್ರವಾಗಿ ಉಳಿಸಿಕೊಂಡಿರುವುದು ಸಮಾಧಾನ ತರುವ ಸಂಗತಿಯಾಗಿದೆ. ಕಂಸಾಳೆ ಪದ, ಗೀಗಿಪದ, ಕೋಲಾಟದ ಪದ, ರಾಗಿ ಬೀಸೋ ಪದ, ಸುಗ್ಗಿ ಹಾಡುಗಳು, ಹೀಗೆ ಇನ್ನೂ ಅನೇಕ ವಿವಿಧ ಬಗೆಯ ಜಾನಪದ ಗೀತೆಗಳು ಆಯಾ ಪ್ರದೇಶದ ಜನರ ದೈನಂದಿನ ಚಟುವಟಿಕೆಗಳನ್ನು, ಕೌಟುಂಬಿಕ ಜೀವನವನ್ನು, ಸಂಬಂಧಗಳನ್ನು, ದೇವರುಗಳನ್ನು ಹಾಗೂ ಧಾರ್ಮಿಕ ಆಚರಣೆಗಳನ್ನು ನಮ್ಮ ಮುಂದೆ ತೆರೆದಿಡುತ್ತವೆ. ಈ ಜಾನಪದ ಗೀತೆಗಳನ್ನು ಸೃಷ್ಟಿಸಿದವರು ಯಾರೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಇವು ಹಳ್ಳಿಯ ಸಾಮಾನ್ಯ ಜನರ ನಡುವೆ ಹುಟ್ಟಿ ಬಾಯಿಂದ ಬಾಯಿಗೆ ಹರಿದು

ಬಂದಿರುವ ಸಿರಿನುಡಿ ಎನ್ನಬಹುದು.

**ಏಳುತ್ತಾಲೇ ಎದ್ದು ಯಾರ್‍ಯಾರ ನೆನೆಯಾಲೆ**
**ಎಳ್ಳುಜೀರಿಗೆ ಬೆಳೆಯೋಳಾ ಭೂಮಿತಾಯಿ**
**ಎದ್ದೊಂದುಗಳಿಗೆ ನೆನೆದೇನು**

**ಹಳ್ಳದ ದಂಡ್ಯಾನ ಹಸಿರು ಬಣ್ಣದ ಗುಬ್ಬಿ**
**ಬಿಸಿಲಿಗೆ ಬಾಯ ಬಿಡತೈತಿ ಆ ಗುಬ್ಬಿ**
**ಕುಶಲದ ನಗುವ ನಗತೈತಿ**

**ಭೂದೇವಿ ನೀಡವ್ವ ಭಾರಿ ಪೈರಾಗಲವ್ವ**
**ಬಡವನ ಹರಕೆ ಕೇಳವ್ವ ಭೂಮಿತಾಯಿ**
**ನಿಂಗ ಜೋಡಿ ಹಣ್ಕಾಯಿ ಒಡೆಸೇನು**

ಹೂಮಾಲೆಯಂತಹ ಮೇಲಿನ ಸಾಲುಗಳನ್ನು ಯಾರು ಯಾವಾಗ ಬರೆದರೋ ಗೊತ್ತಿಲ್ಲ, ಇವು ನೂರಾರು ವರ್ಷಗಳಿಂದ ಸಾವಿರಾರು ಜನಗಳ ಬಾಯಿಂದ ಹರಿದು ಬಂದ ನುಡಿಗಳು, ನಮ್ಮ ಹಳ್ಳಿಗಳಲ್ಲಿ ಕಲೋಪಾಸಕತ್ವವನ್ನು, ಸೃಜನಶೀಲತೆಯನ್ನು, ಮತ್ತು ಮಾಧುರ್ಯವನ್ನು ಹಳ್ಳಿಗರಿಗೆ ತಿಳಿಯದಂತೆ ಅವರ ಜೀವನ ವಿಧಾನವನ್ನಾಗಿ ಪರಿವರ್ತಿಸಿದ ಸಂಸ್ಕೃತಿಯೊಂದರ ಹೆಜ್ಜೆ ಗುರುತುಗಳು. ಪ್ರಾಯಶಃ ಸಹಸ್ರಾರು ವರ್ಷದ ಹಿಂದೆ ಜಗತ್ತಿನಲ್ಲೆಲ್ಲ ಇದ್ದುದ್ದು ಜಾನಪದವೊಂದೇ, ಮಾನವನು ತಾನು ಮಾಡುವ ಕೆಲಸಗಳಲ್ಲೆಲ್ಲಾ ತನ್ಮಯತೆಯನ್ನು ತುಂಬಲು ಮಾಡಿದ ಪ್ರಯತ್ನಗಳ ಸರಮಾಲೆಯೇ ಜಾನಪದವಾಗಿರಬಹುದು. ತನ್ನ ಸುತ್ತಲಿನ ಪರಿಸ್ಥಿತಿಗೆ ತಕ್ಕಂತೆ ತಂತ್ರಜ್ಞಾನಗಳನ್ನೂ, ಆರೋಗ್ಯ ರಕ್ಷಣೆಗೆ ವೈದ್ಯಕೀಯವನ್ನು, ಪ್ರಕೃತಿಯ ಬಿರುಸಿಗೆ ಉತ್ತರವಾಗಿ ಭಕ್ತಿಯನ್ನೂ ಬೆಳೆಸಿಕೊಂಡಿರಬಹುದು.

ಜನಪದ ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಗೀತೆಗೆ ಅಗ್ರ ಸ್ಥಾನ ಸಲ್ಲುತ್ತದೆ. ಅದು ಇತರ ಪ್ರಕಾರಗಳಿಗಿಂತ ಅತ್ಯಂತ ಪ್ರಾಚೀನವೂ ಆಗಿದೆ. ಜನಪದ ಲಯಬದ್ಧವಾದ ಭವೋದ್ಗಾರ ರಾಗವಾಗಿ ಪರಿಣಮಿಸಿದೆ. ಆಶ್ಚರ್ಯ, ಭೀತಿ, ಸಂತೋಷ ಇತ್ಯಾದಿ ಭಾವನೆಗಳು ತರಂಗಗಳಂತೆ ಲಯಬದ್ಧವಾಗಿ ಹೊರಹೊಮ್ಮಿದಾಗ ಗೀತೆಯು ಉದಯವಾಗುತ್ತದೆ. ಗಂಡ ಹೆಂಡಿರ ಪ್ರಣಯ ಲೀಲೆಯ, ಶಿಶು ಪಾಲನೆ, ಭೂತ ಪ್ರಯತ್ನಗಳ ಪೂಜೆಯ ಹಾಗೂ ಬೇಟೆ ಬೇಸಾಯಗಳ ಅಂಗವಾಗಿ ಗೀತೆಗಳು ತಾವಾಗಿಯೇ ಹೊರಹೊಮ್ಮುತ್ತವೆ. ಹೀಗೆ ಮಾನವನ ಭಾವೋತ್ಕರ್ಷದ ಮತ್ತು ಸಹಜ ಚಟುವಟಿಕೆಗಳ ಪರಿಣಾಮವಾಗಿ ಗೀತೆಗಳು ಉದಯವಾಯಿತೆನ್ನಬಹುದು ಹಾಗೂ

ಅವನ ಭಾವಲೋಚನೆಗಳು, ಅಭಿರುಚಿಗಳು, ಅವನ ಪ್ರವೃತ್ತಿಗಳು, ವೃತ್ತಿಗಳಲ್ಲಿ ಮಹತ್ವ ಪಡೆದು ಗೀತೆಗಳಲ್ಲಿ ಪ್ರತಿಫಲನಗೊಂಡಿದ್ದು ಮಾನವನ ಪ್ರವೃತ್ತಿ ಹಾಗೂ ಸಂಸ್ಕೃತಿಗಳನ್ನು ಗುರುತಿಸಬೇಕಾದರೆ ಜನಪದ ಗೀತೆಗಳ ಶರಣು ಹೋಗಬೇಕಾಗುತ್ತದೆ. ಇಂತಹ ಗೀತೆಗಳು ಪ್ರಮುಖವಾಗಿ

» ಅಜ್ಞಾತ ಕರ್ತೃತ್ವವನ್ನು ಹೊಂದಿರುತ್ತವೆ

» ಸಾಮೂಹಿಕ ಪುನರ್ ಸೃಷ್ಟಿಯಾಗಿರುತ್ತವೆ

» ಮಾತುಮಾತಿನ ಪರಂಪರೆಯನ್ನು

» ಗೇಯತೆ ಮತ್ತು ಸರಳತೆಯ ಜನಪ್ರಿಯ ಗೀತೆಗಳು

ಜನರು ಗುಂಪಿನಲ್ಲಿ ಕೆಲಸ ಮಾಡುವಾಗ ಅಥವಾ ವಿನೋದ ಕೂಟಗಳಲ್ಲಿ ಕಲಿಯುವಾಗ ಹುಟ್ಟಿದವುಗಳಾಗಿವೆ. ಒಂದು ಪಕ್ಷದ ವಾದ, ಹಾಗೂ ಹಲವು ಜನ ಕೂಡಿ ಒಂದೊಂದೇ ಸಾಲು ಸೇರಿಸಿ ಹಾಡು ಯಾರೋ ಒಬ್ಬನಿಂದ ಮೊದಲು ಹಾಡು ಸೃಷ್ಟಿಯಾಗುತ್ತದೆ. ಚತುರನಾದ ಗಾಯಕನು ಅದನ್ನು ಹಾಡುವಾಗ ಅಲ್ಲೊಂದು ಪದ ಇಲ್ಲೊಂದು ಪದ ಸಾಲು ಸಾಲು ಮಾರ್ಪಡಿಸಬಹುದು. ಅದು ಮೌಖಿಕ ಪರಂಪರೆಯ ಮೂಲಕ ಜನರಿಂದ ಜನಕ್ಕೆ ಪೀಳಿಗೆಯಿಂದ ಪೀಳಿಗೆಗೆ ಹರಿಯುವಾಗ ಹೊಸ ಸಾಲುಗಳು ಸೇರಿಕೊಳ್ಳುವ ಸಾಧ್ಯತೆಯನ್ನು ಕಾಣುತ್ತೇವೆ. ಒಂದು ಹಾಡು ಪ್ರಾರಂಭದಲ್ಲಿ ವೈಯಕ್ತಿಕ ಸೃಷ್ಟಿ ಆಗಬಹುದು. ಅಥವಾ ಗೋಷ್ಟಿ ಸೃಷ್ಟಿಯು ಆಗಬಹುದು. ಒಂದು ಪದದ ಸಾಲುಗಳು ಅಥವಾ ಮಾತುಗಳು ಬೇರೊಂದು ಹಾಡಿನಲ್ಲಿ ಪುನರಾವರ್ತನೆಗೊಳ್ಳಬಹುದು. ಈ ಪುನರುಕ್ತಿ ಈ ಗೀತೆಗಳ ಒಂದು ಅನಿವಾರ್ಯ ಲಕ್ಷಣವಾಗಿದೆ. ಜನಪದ ಗೀತೆಗಳಲ್ಲಿ ಸಂಗ್ರಹಗೊಂಡಿರುವ ಸಾಮಾಜಿಕ ಚಿತ್ರಗಳು ಹಾಗೂ ಸಾಂಸ್ಕೃತಿಕ ಮೌಲ್ಯಗಳು ಘಟಕದ ಸಂಗತಿಗಳಿದ್ದು ಈ ಹೊತ್ತಿಗೆ ಅವುಗಳಿಂದ ಸಮಾಜದ ಜಡತ್ವವನ್ನು ತೊಡೆದು ಪುನಶ್ಚೇತನ ಗೊಳಿಸುವ ಪ್ರೇರಕ ಶಕ್ತಿಗಳಾಗಿವೆ. ಅಷ್ಟೇ ಅಲ್ಲ ವಿಶ್ವ ಸತ್ಯಗಳಂತಿರುವ ಕೆಲವು ಮೌಲ್ಯಗಳು, ಪ್ರಯೋಜನಗಳು ಎಲ್ಲಾ ಕಾಲಕ್ಕೂ ಅವಶ್ಯಕವಾಗಿವೆ. ಆದ್ದರಿಂದ ಜನಪದ ಗೀತೆಗಳು ರಾಮಾಯಣ ಮಹಾಭಾರತಗಳಂತೆ ರಾಷ್ಟ್ರೀಯ ದಾರಿ ದೀಪಗಳಾಗಿ ಕಾಣುತ್ತವೆ.

ವಿದ್ವಾಂಸರು ಜನಪದ ಗೀತೆಗಳನ್ನು ನಾನಾ ರೀತಿಯಲ್ಲಿ ವರ್ಗೀಕರಿಸಲು ಪ್ರಯತ್ನಿಸಿದ್ದಾರೆ. ಅವುಗಳನ್ನು ಗಂಡಸರ ಹಾಡು, ಹೆಂಗಸರ ಹಾಡು, ಉಭಯ ಹಾಡು ಮತ್ತು ಮಕ್ಕಳ ಹಾಡುಗಳೆಂದು ನಾಲ್ಕು ವಿಭಾಗಗಳಾಗಿ ವಿಂಗಡಿಸಿದ್ದಾರೆ. ಈ ವಿಭಜನೆ ಜನಪದ ಗೀತೆಗಳನ್ನೆಲ್ಲ ಒಳಗೊಂಡರು ಅವುಗಳ ರೂಪ ಸ್ವರೂಪಗಳು ಅದರಲ್ಲಿ ಪ್ರತಿಫಲನಗೊಳ್ಳುವುದಿಲ್ಲ. ಅವುಗಳನ್ನು ಹಾಡುವಾಗ ಬಳಸುವ ವಾದ್ಯಗಳನ್ನು

ದೃಷ್ಟಿಯಲ್ಲಿ ಇಟ್ಟುಕೊಂಡು ವಿಂಗಡಿಸುವುದಾದರೆ ಡೊಳ್ಳಿನ ಹಾಡುಗಳು, ಗುಮ್ಮಟ ಹಾಡುಗಳು, ಕಂಸಾಳೆ ಹಾಡುಗಳು, ಕುಟ್ಟುವಾಗ, ಬೀಸುವಾಗ, ನಾಟಿ ಹಾಕುವಾಗ, ನೂಲುವಾಗ, ವಾದ್ಯಗಳಿಗೆ ಅವಕಾಶಗಳು ಇರುವುದಿಲ್ಲ. ಸೋಬಾನ ಪದಗಳು, ಹಾಸ್ಯ ಗೀತೆಗಳು, ಇವುಗಳನ್ನು ಬಿಟ್ಟರೆ ಜನಪದ ಗೀತೆಗಳು ಮುಖ್ಯವಾಗಿ ಕ್ರಿಯಾತ್ಮಕವಾಗಿರುವುದರಿಂದ ಆಯಾ ಸಂದರ್ಭಕ್ಕೆ ತಕ್ಕಂತೆ ಅವುಗಳನ್ನು ಬಳಸುವುದರಿಂದ ಅವುಗಳನ್ನು ವಿಭಜಿಸುವುದು ಸೂಕ್ತವಾಗಿ ತೋರುತ್ತದೆ. ಈ ತತ್ವದ ಪ್ರಕಾರ ಅವುಗಳನ್ನು ಕುಣಿತದ ಹಾಡು, ಧಾರ್ಮಿಕ ಗೀತೆ, ಮದುವೆ ಹಾಡು, ವೃತ್ತಿ ಗೀತೆ, ಕೌಟುಂಬಿಕ ಗೀತೆ, ಯುದ್ಧಗೀತೆ, ಶಿಶುಗೀತೆ, ನೀತಿಗೀತೆ, ವರ್ಣಕಗೀತೆ, ಸಂಕೀರ್ಣ ಗೀತೆ, ಸ್ತುತಿ ಗೀತೆಗಳು, ಸಾಂಸ್ಕೃತಿಕ ಗೀತೆಗಳು, ಪ್ರೇಮಗೀತೆಗಳು, ನೀತಿ ಗೀತೆಗಳು, ಸಂವಾದ ಗೀತೆಗಳು, ಪೌರಾಣಿಕ ಗೀತೆಗಳು, ಕಥನ ಗೀತೆಗಳು, ಸಂಕೀರ್ಣ ಗೀತೆಗಳು, ಪ್ರಕೃತಿ ಗೀತೆಗಳು, ಹೀಗೆ ಹಲವಾರು ವರ್ಗಗಳಾಗಿ ವಿಂಗಡಿಸಬಹುದು.

ಕಾವ್ಯ ಮಹತ್ವದ ದೃಷ್ಟಿಯಿಂದ ಜನಪದ ಗೀತೆಗಳು ಶಿಷ್ಟಪದ ಗೀತೆಗಳಿಗಿಂತ ಕನಿಷ್ಠವಾಗಿರುವುದಿಲ್ಲ. ಪ್ರಜ್ಞಾಪೂರ್ವಕವಾಗಿ ಬರೆದ ಅಥವಾ ಕೊರೆದ ಬಹುಮಂದಿ ಪಂಡಿತ ಕವಿಗಳಿಗೆ ಕೆಲವು ಚಮತ್ಕಾರ ಪ್ರದರ್ಶನ ಶಕ್ತಿಯಷ್ಟೇ ಲಭ್ಯವಾಗಿರುವುದು ಹಾಗೂ ಕಾವ್ಯ ನಿರ್ಮಾಣ ಪ್ರಜ್ಞೆಯಿಂದ ಕೆಲವು ಭಾವ ನಿರ್ಭರತೆಯಿಂದ ಹಾಡಿದ ಜನಪದ ಕವಿಗಳು ಕಾವ್ಯದ ಮೂಲ ಸತ್ವವನ್ನೇ ಚಮತ್ಕರಿಸಿಕೊಂಡರು. ಜನಪದ ಕವಿಗಳ ಪ್ರತಿಭಾನ್ವಿತ ಸೃಷ್ಟಿಯಲ್ಲಿ ಧ್ವನಿ ಹೇಗೆ ತರಂಗಗಳಾಗಿ ಪ್ರೌಢ ನಾಗರಿಕನ ಕವಿ ಸೃಷ್ಟಿಯನ್ನು ಬದಲಿಸುವಂತೆ ಹೆಜ್ಜೆ ಹೆಜ್ಜೆಗೂ ಮಿಡಿಯುತ್ತಿದೆ. ಇಲ್ಲಿ ಜೀವನದ ದರ್ಶನ, ಜೀವನದ ಮೌಲ್ಯ ಇವು ಇವುಗಳ ಮಾನದಂಡಗಳಿಂದ ಅಳಿದರೂ ಜನಪದ ಗೀತೆಗಳು ಉತ್ತಮ ಕಾವ್ಯದ ಮಟ್ಟಕ್ಕೇರುವಲ್ಲಿ ಯಾವುದೇ ಸಂಶಯ ಇಲ್ಲ.

**ಬೆಟ್ಟಾದ ಬಿದಿರೇ ಹಟ್ಟಿಗೆ ನೆರಳಾದೆ**
**ಜಾಣ ರಂಗನಿಗೆ ಕೊಳಲಾದೆ ಸಿರಿ ಬಿದಿರೇ**
**ಮುತ್ತು ಕೇರೋಕೆ ಮರನಾದೆ**

**ಮುತ್ತಿನ ಮೇಲುಕೋಟೆ ಮತ್ತೀಗ ಹರಿಕೋಟೆ**
**ಉತ್ತಮರಿರುವುದು ಮೇಲುರ್ಕೋಟೆ ಬೀದಿಲಿ**
**ಚೆಲುವಯ್ಯ ಮುತ್ತಿನ ತೇರ ಹರಸ್ಯಾನ್**

**ಬಸವ ಭಕ್ತಿಯ ಬೀಜ ಬಸವ ಮುಕ್ತಿಯ ತೇಜ**
**ಬಸವ ಕಾಯಕದ ಗುರು ಬೀಜ ಶಿವಮತಕೆ**
**ಬಸವ ಓಂಕಾರ ಶಿವನಾಮ**

ಜನಪದ ಗೀತೆಗಳಲ್ಲಿ ಅಭಿವ್ಯಕ್ತಗೊಳ್ಳುವ ಸಂಸಾರ ಧರ್ಮದಲ್ಲಿ, ಕರ್ಮ, ಭಕ್ತಿಯೊಳಗೇ ಸೌಂದರ್ಯೋಪಾಸನೆ, ಜೀವನ ಮೌಲ್ಯ ವಿವರಣೆಯಲ್ಲಿ ಅಂತೆಯೇ ಅವರ ರಚಿಕತೆಯಲ್ಲಿ ಕರ್ನಾಟಕ ಸಂಸ್ಕೃತಿಯ ಮಹೋನ್ನತಿ ಪ್ರಕಟವಾಗುತ್ತದೆ. ಸಮಾಜದ ಭದ್ರತೆಗೆ ಸಂಸಾರದ ಸಾರತ್ವವೇ ಈ ಮೂಲವಾಗಿದೆ. ಸಾಮಾನ್ಯ ಜೀವನದಲ್ಲಿ ಕಾಣುವಂತಹ ಸ್ವಸ್ಥ ಶಿಷ್ಟ ಜೀವನದಲ್ಲಿ ಕಾಣುವುದು ಕಷ್ಟ. ಗಂಡಹೆಂಡತಿ, ತಂದೆಮಗ, ತಾಯಿಮಗಳು, ಅತ್ತೆಸೊಸೆ ಇವೆ ಮೊದಲಾದ ಬಾಂಧವ್ಯಗಳ ಒಕ್ಕೂಟವೇ ಸಂಸಾರಗಳಲ್ಲಿ ಸಾಮರಸ್ಯ ಇದ್ದಷ್ಟು ಮಾಧುರ್ಯ. ಪೌರಾಣಿಕ ಪ್ರಜ್ಞೆ ಜೀವಂತ ಜೀವನಾಮ ಅನುಭವವಾಗಿ ಮಾರ್ಪಟ್ಟಿದೆ. ಒಂದೊಂದು ಮಾತಿನಲ್ಲಿಯೂ ಭಾವ ಹೆಪ್ಪುಗಟ್ಟಿದಂತಿದೆ. ಸಂಸಾರ ಧರ್ಮದ ಬ್ರಹ್ಮ ಸೂತ್ರಗಳಂತೆ ಈ ಹಾಡುಗಳ ಗೀತೆಗಳನ್ನು ನೋಡಬಹುದು.

**ಮಕ್ಕಳ ಕೊಡು ಶಿವನೇ ಮತ್ತೊಂದು ನಾ ಒಲ್ಲೆ**
**ಹತ್ತು ಮಂದ್ಯಾಗ ಹರುನೀರ ತರುವಂಥ**
**ಮುತ್ತೈದಿತನದ ಕೊಡು ಶಿವನೇ**

**ಮಕ್ಕಳಿಲ್ಲದ ಮನೆಯು ಹೊಕ್ಕರೆ ಬೆನ್ನಂಗೆ**
**ಇಕ್ಕಿದ ರಂಗೋಲಿಯಳಿಯವು ದೇವರೇ**
**ಮಕ್ಕಳ ಕೊಡು ನಮ್ಮ ಮನೆತುಂಬ**

**ಜನಕಾರಾಯನ ಮಗಳು ಬನಕೆ ತೊಟ್ಟಿಲ ಕಟ್ಟಿ**
**ಲವಕುಶರನ್ನ ತೂಗ್ಯಾಳೋ ಸೀತಾದೇವಿ**
**ನಗುತ ವನವಾಸ ಕಳೆದ್ಯಾಳ**

ಸಂಸಾರದ ತೇರಿಗೆ ಹಾಸ್ಯ ವಿನೋದಗಳು ತೈಲವಾಗುತ್ತದೆ. ಪ್ರೀತಿ ಇಲ್ಲದಿದ್ದರೆ ತೇರಿನ ಚಕ್ರ ಮುಂದೆ ಹರಿಯುವುದಿಲ್ಲ. ಹಾಗೇ ಬಯಲಾಟ, ಹಬ್ಬ ಹರಿದಿನ, ಕೋಲಾಟ ಅವರ ಹೃದಯವನ್ನು ಹಿಗ್ಗಿಸುವಂತೆ ಮಾಡುವ ಗೀತೆಗಳು.

**ಕೂಸು ಕುಂಚಿಗೆ ತಿಂತು ಹಾಸಿಗೆ ನೆಲತಿಂತ್ತು**
**ಭಾವಯ್ಯನ ಗಡ್ಡ ಇಲಿ ತಿಂತು ಮಿಕ್ಕಿದ್ದು**
**ದೀಪಾವಳಿಗೆ ಮುಂಚೆ ಚಿಗತಾವು**

**ಕುಂಬಾರ ನಿನಗ್ಯಾಕೋ ಗೊಂಬೆ ಮಾಟದ ಹೆಣ್ಣು**
**ತುಂಬಿದ ಮಣ್ಣು ತುಳಿಯೆಂದು ಮನೆ ಮನೆಗೆ**

**ಹೊತ್ತು ಮಾರೆಯಿಂದ ಹೊಸ ಮಡಕೆ**

ಮಕ್ಕಳ ಬಾಲಲೀಲೆಯ ಪ್ರಶಂಸೆಯಲ್ಲಿ ಪ್ರಾತಃಕಾಲದ ಸೂರ್ಯನಂತೆ ಹೊಳೆಯುತ್ತಿರಬೇಕೆನ್ನುವ ತಾಯಿಯ ತುಡಿತ, ಮಕ್ಕಳ ಚಂದದ ನಗು, ಮಗು ಸದಾ ಲವಲವಿಕೆಯ ಆಟ, ಭಾವೋತ್ಕರ್ಷದ ಮತ್ತು ಸಹಜ ಚಟುವಟಿಕೆಗಳ ಪರಿಣಾಮವಾಗಿ ಗೀತೆಗಳು ಉದಯವಾಯಿತೆನ್ನಬಹುದು ಹಾಗೂ ಅವನ ಭಾವಲೋಚನೆಗಳು, ಅಭಿರುಚಿಗಳ ಮಹತ್ವ ಪಡೆದು ಗೀತೆಗಳಲ್ಲಿ ಪ್ರತಿಫಲನಗೊಂಡಿದೆ.

**ಕಪ್ಪೆ ಕರಕರ**
**ತುಪ್ಪ ಜಲಜಲ**
**ಮಾವಿನ ವಾಟೆ**
**ಮರದಲ್ಲಿ ಪೋಟೆ**
**ಹದ್ದಿನ ಕೈಲಿ ಸುದ್ದಿ ಕೇಳ್ಸಿ**
**ಕಾಗೆ ಕೈಲಿ ಕಂಕಣ ಕಟ್ಟಿಸಿ**
**ಸೊಳ್ಳೆ ಕೈಲಿ ಸೋಬಾನ ಹೇಳ್ಸಿ**
**ನಳ್ಳಿ ಕೈಲಿ ನಗಾರಿ ಬಾರಿಸಿ**
**ಸಣ್ಣಿ ಮದುವೆ**
**ಶ್ರಾವಣ ಶನಿವಾರವೋ ಶನಿವಾರ**

ಜನಪದ ಗೀತೆಗಳು ಪ್ರಾಚೀನ ಸಂಸ್ಕೃತಿಯ ಮ್ಯೂಸಿಯಂಗಳನ್ನು ಗತಕಾಲದ ಹೆಜ್ಜೆ ಗುರುತುಗಳನ್ನು ಭಾವಿಸಲಾಗದು. ಅಲ್ಲಿ ಚಿತ್ರತವಾಗಿರುವ ಸಮಾಜವಾಗಲಿ, ಸಂಪ್ರದಾಯಗಳಾಗಲಿ, ಪ್ರಕಟಣೆಗೊಳಿಸುವ ಅಭಿರುಚಿ, ಮನೋಧರ್ಮಗಳಾಗಲಿ ಎಂದು ಕಾಣೆಯಾಗಿರಬಹುದು. ಆದರೆ ಮಾನವನ ಮೂಲಭೂತ ಸ್ವರೂಪವಾಗಲಿ, ಪ್ರವೃತ್ತಿಗಳೇ ಆಗಲಿ ಪರಿವರ್ತನೆಗೊಂಡಿಲ್ಲ ಎಂಬ ಸಂಗತಿಯನ್ನು ಮಾತ್ರ ನಾವು ಅಲ್ಲಗಳೆಯಂತಿಲ್ಲ. ಇತ್ತೀಚಿನ ದಿನಮಾನಗಳಲ್ಲಿ ಕನ್ನಡದಲ್ಲಿ ಜನಪದ ಸಾಹಿತ್ಯವು ಹೆಮ್ಮರವಾಗಿ ಬೆಳೆಯಲಿಕ್ಕೆ ಅನೇಕ ಕವಿಗಳು ತಮ್ಮ ಪ್ರತಿಭೆಯನ್ನು ನೀಡಿದ್ದಾರೆ. ಅದರಲ್ಲೂ ಬೇಂದ್ರೆ ಅವರಂತಹ ಪ್ರತಿಯೊಬ್ಬ ವರಕವಿಗಳು ಜನಪದ ಸಾಹಿತ್ಯದ ಪ್ರಭಾವಕ್ಕೊಳಗಾಗಿ ವಿನೂತನ ಕಾವ್ಯಪಥವನ್ನು ನಿರ್ಮಿಸಿದ್ದಾರೆ. ಅಂತೆಯೇ ಜಿ.ಪಿ ರಾಜರತ್ನಂ, ಬೆಟಗೇರಿ ಕೃಷ್ಣಶರ್ಮ, ಕೆ.ಎಸ್ ನರಸಿಂಹಸ್ವಾಮಿ, ಚಂದ್ರಶೇಖರ ಕಂಬಾರ ಮೊದಲಾದವರು ಜನಪದ ಗೀತೆಗಳನ್ನು ಕಾವ್ಯಗಳ ರೂಪದಲ್ಲಿ ಹಾಡಿನ ರೂಪದಲ್ಲಿ ರೂಪಿಸಿದ್ದಾರೆ.

## ಪರಾಮರ್ಶನ ಗ್ರಂಥಗಳು:

1. ಜವರೇಗೌಡ ದೇ., (2023), ಜನಪದ ಗೀತಾಂಜಲಿ, ಸಪ್ನ ಬುಕ್ ಹೌಸ್, ಬೆಂಗಳೂರು.
2. ಶ್ರೀಶೈಲ ನಾಗರಾಳ, (2024), ಜನಪದ ಸಮಾಜೋಸಂಸ್ಕೃತಿ, ಸಪ್ನ ಬುಕ್ ಹೌಸ್, ಬೆಂಗಳೂರು.
3. ಹೆಗಡೆ ಬಾಳಗೋಡ ಜಿ.ಜಿ., (2023), ಜಾನಪದ ದೀವಿಗೇ, ಪ್ರೇಮ ಪ್ರಕಾಶನ, ಮೈಸೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.